MVC 529/2021 RW-1

**ದಿನಾಂಕಃ 24.04.2026**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಎದುರದಾರರ ಪರ ವಕೀಲ ರಿಂದಃ**

ನಾನು ನನ್ನ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳನ್ನು ತಿಳಿದುಕೊಂಡು ಸರಿ ಇರುತ್ತದೆಂದು ಎಂದು ಒಪ್ಪಿ- ಸಹಿ ಮಾಡಿರುತ್ತೇನೆ.

1. ಅಧಿಕಾರ ಪತ್ರವನ್ನು ಹಾಜರುಪಡಿಸುತ್ತಿದ್ದು, ಅದನ್ನು **ನಿಆರ್ -1 ಎಂದು** ಗುರುತಿಸಲಾಯಿತು.
2. ವಿಮಾ ಪಾಲಿಸಿಯ ಯಥಾ ನಕಲನ್ನು ಹಾಜರುಪಡಿಸುತ್ತಿದ್ದು, ಅದನ್ನು **ನಿಆರ್ -2 ಎಂದು** ಗುರುತಿಸಲಾಯಿತು.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

1. ಚಾರ್ಜ್ ಶೀಟ್ ಪ್ರಕಾರ ಅಪಘಾತವು 2 ಮೋಟಾರ್ ಸೈಕಲ್ ಮತ್ತು ಟ್ರ್ಯಾಕ್ಟರ್ ಮದ್ಯೆ ಆಗಿರುತ್ತದೆ ಎಂದರೆ ಸರಿ. ಅಪಘಾತದ ಸಮಯದಲ್ಲಿ ಟ್ರ್ಯಾಕ್ಟರ್ ಮತ್ತು ಟ್ರೈಲರ್ ಸಂಖ್ಯೆ ಃ ಕೆಎ-51-ಟಿ-6263 ಮತ್ತು ಕೆಎ-51-ಟಿ- 6264 ಸದರಿ ಎರಡೂ ವಾಹನಗಳ ವಿಮೆ ಚಾಲ್ತಿಯಲ್ಲಿತ್ತು. ಸದರಿ ಟ್ರ್ಯಾಕ್ಟರ್ ಚಾಲಕ ಉಮೇಶ್ ಬಿನ್ ಕರಿಯಣ್ಣ ಇವರ ಚಾಲನಾ ಪರವಾನಗಿ ಚಾಲ್ತಿಯಲ್ಲಿತ್ತು. ದೂರಿನಲ್ಲಿ ಒಂದು ನೋಂದಣಿ ಸಂಖ್ಯೆ ಇರದ ಟ್ರ್ಯಾಕ್ಟರ್ ಒಂದು ಮೋಟರ್ ಸೈಕಲ್ ಗೆ ಡಿಕ್ಕಿ ಹೊಡೆದು ನಂತರ ಇನ್ನೊಂದು ಮೋಟಾರ್ ಸೈಕಲ್ ಗೆ ಡಿಕ್ಕಿ ಹೊಡೆದಿರುತ್ತದೆ ಎಂದು ನಮೂದಾಗಿರುತ್ತದೆ ಎಂದರೆ ಸರಿ.

2. ಮೊದಲನೆಯದಾಗಿ ಕೆಎ-51-ಟಿ-6263 ನಂ. ನ ಇಂಜಿನ್ ಮೋಟಾರ್ ಸೈಕಲ್ ಗೆ ಡಿಕ್ಕಿ ಪಡಿಸಿರುತ್ತದೆ ಎಂದರೆ ಸರಿಯಲ್ಲ. ಐ ಎಂ ವಿ ವರದಿಯಲ್ಲಿ ಕೆಎ-51-ಟಿ-6263 ಇಂಜಿನ್ ಸಹ ತಪಾಸಣೆಗೆ ಒಳಪಟ್ಟಿರುತ್ತದೆ ಎಂದರೆ ಸರಿ. ಪೋಲಿಸರು ಸಂಪೂರ್ಣ ತನಿಖೆ ಮಾಡಿ ಮೇಲೆ ಹೇಳಿದ ವಾಹನಗಳ ವಿರುದ್ದ ದೋ.ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ. ನಾವು ಪಕ್ಷಗಾರರಲ್ಲದ ಕಾರಣ ದೋ.ಪಟ್ಟಿ ಪ್ರಶ್ನಿಸಿರುವುದಿಲ್ಲ.

3. ನಮ್ಮ ಕಂಪನಿ ಕಡೆಯಿಂದ ಆಂತರಿಕ ತನಿಖೆ ಮಾಡಿಸಿರುವುದಿಲ್ಲ. ಕೆಎ-06-ಟಿ- 9535 ವಾಹನ ಯಾರಿಗೆ ಸಂಬಂಧಿಸಿದ್ದು ಎಂದು ನನಗೆ ಹೇಳಲು ಆಗುವುದಿಲ್ಲ. ದೂರು ಕೊಡುವ ಸಮಯದಲ್ಲಿ ಟ್ರೆಲರ್ ಸಂಖ್ಯೆ ಕೆಎ-51-ಟಿ- 6264 ಎನ್ನುವ ಬದಲಾಗಿ ಕೆಎ- 06-ಟಿ- 9535 ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ತಪ್ಪಿನಿನ ಬಗ್ಗೆ ಪೋಲಿಸರು ಸಂಪೂರ್ಣ ತನಿಖೆ ಮಾಡಿ ದೋ.ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಸುಳ್ಳಾಗಿ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಅಪಘಾತವಾದ ಮರುದಿನ ದೂರು ದಾಖಲಿಸಿರುತ್ತಾರೆ ಎಂದರೆ ಸರಿ. ದೋ.ಪಟ್ಟಿ ಸರಿಯಾಗಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.